ವಿಷಯ: ಸಾರಿಗೆ ಸಂಸ್ಥೆಯಲ್ಲಿರುವ ಹಳೆ ಬಸ್ಸುಗಳ ಸಂಖ್ಯೆ.

1153 (1736)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಎಷ್ಟು ವಾಹನಗಳು ಕೆಟ್ಟುಹೋಗಿ ರಿಪೇರಿಯೂ ಆಗದೆ ನಿಂತಿರುವ ಬಸ್ಸುಗಳು ಎಷ್ಟು?

ಆ) ಈ ಬಸ್ಸುಗಳನ್ನು ಏಲಿಂ ಹಾಕಲಾಗುವುದೇ ಅಥವಾ ಬಿಡಿ ಭಾಗಗಳನ್ನು ಬೇರೆ ಬೇರೆಯಾಗಿ ಮಾರಲಾಗುವುದೇ?

ಇ) ಏಲಂ ಮಾಡಲಾಗದಿದ್ದಲ್ಲಿ ಸಂಸ್ಥೆಗೆ ಬರುವ ಆದಾಯ ಕುಂಠಿತವಾಗುವುದಿಲ್ಲವೇ? ವಿವರ ನೀಡುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ದಿನಾಂಕ: 18-4-1998ರವರೆಗೆ 4955 ಅನುಸೂಚಿಗಳಿಗೆ 5401 ವಾಹನಬಲದಿಂದ ಕಾರ್ಯಾಚರಣೆ ಮಾಡುತ್ತಿದೆ. ಈ ವಾಹನಗಳಲ್ಲಿ 124 ವಾಹನಗಳು ಇಂಜಿನ ಬದಲಾವಣೆಗಾಗಿ, ಭಾರಿ ಕವಚ ದುರಸ್ತಿಗಾಗಿ ಅಪಘಾತ ದುರಸ್ತಿಗಾಗಿ, ಅರ್ಹತಾ ನೋಂದಣಿಗಾಗಿ ಈ ದಿನಾಂಕಕ್ಕೆ ವಿವಿಧ ಘಟಕ ಮತ್ತು ವಿವಿಧ ವಿಭಾಗ ಕಾರ್ಯಾಗಾರಗಳಲ್ಲಿ ನಿಂತಿವೆ. 124 ವಾಹನಗಳಲ್ಲಿ 6 ವಾಹನಗಳು ರದ್ದುಗೊಳಿಸುವ ಸಲುವಾಗಿ ನಿಂತಿದ್ದು ವಿಲೇವಾರಿಯ ನಿರೀಕ್ಷೆಯಲ್ಲಿವೆ.

ಆ) ನಿಲುಗಡೆಯ ವಾಹನಗಳನ್ನು ಹರಾಜು ಮಾಡಲಾಗುವುದಿಲ್ಲ. ಮೊದಲ ಆಧ್ಯತೆಯ ಮೇಲೆ ಈ ವಾಹನಗಳನ್ನು ಮಾರ್ಗದ ಮೇಲೆ ತರಲಾಗುವುದು. ರದ್ದುಗೊಳಿಸಲಾಗಿರುವ ವಾಹನಗಳನ್ನು ಯೋಜನೆ ರೂಪಿಸಿಕೊಂಡು ಹಂತಹಂತವಾಗಿ ಹರಾಜು ಮಾಡಲಾಗುವುದು. ವಾಹನವನ್ನು ರದ್ದುಗೊಳಿಸಿರುವಿಕೆಯು ಘೋಷಣೆಯಾದ ನಂತರ ಅನುಪಯುಕ್ತ ಅಸೆಂಬ್ಲಿಗಳನ್ನು, ವಾಹನವನ್ನು ವಿಲೇವಾರಿ ಮಾಡಲಾಗುವುದು.

ಇ) ರದ್ದತಿ ವಾಹನಗಳ ಅತೀ ಶೀಘ್ರ ವಿಲೇವಾರಿಗಾಗಿ ಟೆಂಡರ್ ಮೂಲಕ ಹರಾಜು ರೀತಿಯಲ್ಲಿ ಪ್ರತೀ ತಿಂಗಳು ಹರಾಜು ಮಾಡಲಾಗುವುದು. 1997-98ನೇ ಸಾಲಿನಲ್ಲಿ 1141 ರದ್ದತಿ ವಾಹನಗಳನ್ನು ಟೆಂಡರ್ ಮೂಲಕ ಹರಾಜು ಮಾಡಲಾಗಿದೆ.

ವಿಷಯ: ತಿರುಮಲಕ್ಕೆ ವಿಶೇಷಾಧಿಕಾರಿಯ ವರ್ಗಾವಣೆ